ಭೂತಗಳ ಲೋಕ. ಮನುಷ್ಯರನ್ನು ತಿನ್ನುವ, ಅದರಲ್ಲೂ ಕಂದಮ್ಮಗಳನ್ನು ಇಷ್ಟಪಟ್ಟು ತಿನ್ನುವ ರಕ್ಕಸರ ಲೋಕ. ಅವರ ಪಾಲಿಗೆ ಮಕ್ಕಳೆಂದರೆ ಹುರುಳಿಕಾಯಿಗಳು ಇದ್ದಂತೆ.

ಸೋಫಿ ಅನಾಥ ಹುಡುಗಿಯಷ್ಟೇ. ಒಂದರ್ಥದಲ್ಲಿ ಬಿಎಫ್‌ಜಿ ಕೂಡ ಅನಾಥನೇ. ನರಭಕ್ಷಕ ರಕ್ಕಸರ ಲೋಕದಲ್ಲಿ ಆತ ಗುಂಪಿಗೆ ಸೇರದ ಪದದಂತೆ ವಾಸಿಸುತ್ತಿದ್ದಾನೆ. ಅವನ ಸಹವರ್ತಿಗಳು ಮನುಷ್ಯರನ್ನು ಮುರಿದುತಿಂದರೆ, ಈತ ತರಕಾರಿಗಳನ್ನು ಇಷ್ಟಪಟ್ಟು ತಿನ್ನುತ್ತಾನೆ. ಇಂಥ ವಿಶಿಷ್ಟ ಅಜ್ಜನೊಂದಿಗೆ ಸೋಫಿ ಭಯ, ರೋಮಾಂಚನ ಹಾಗೂ ಅಪೂರ್ವ ಅನುಭವಗಳಿಗೆ ಮುಖಾಮುಖಿಯಾಗುತ್ತಾಳೆ.

ಯಾವುದೋ ಗುಂಗಿನಲ್ಲಿ ಅಜ್ಜನೇನೋ ಸೋಫಿಯನ್ನು ಹಾರಿಸಿಕೊಂಡು ಬಂದ. ಆದರೆ, ಅವಳನ್ನು ರಕ್ಕಸರ ಕಣ್ಣಿಗೆ ಕಾಣಿಸದಂತೆ ಕಾಪಾಡುವುದು ಹೇಗೆ? ಅವರೋ ಮನುಷ್ಯರ ವಾಸನೆಯನ್ನು ಹುಡುಕಿಕೊಂಡು ಬಿಎಫ್‌ಜಿಯ ಮನೆಗೆ ಬಂದುಬಿಡುತ್ತಾರೆ. ಅವರ ಕೈಗೆ ಸಿಕ್ಕಿಬೀಳದಿರಲು ಗುಬ್ಬಚ್ಚಿ ಮರಿಯಂಥ ಸೋಫಿ ಎಲ್ಲೆಲ್ಲೋ ಅಡಗಿಕೊಂಡು ಕೊನೆಗೂ ದುಷ್ಟರ ಕಣ್ಣಿಗೆ ಮಣ್ಣೆರೆಚುವಲ್ಲಿ ಯಶಸ್ವಿಯಾಗುತ್ತಾಳೆ. ರಕ್ಕಸರು ಸೋಫಿಯ ವಸ್ತ್ರವನ್ನು ಮೂಸುತ್ತ ಅವಳನ್ನು ಹುಡುಕುತ್ತಿದ್ದರೆ, ಸೋಫಿಯನ್ನು ನಮ್ಮೊಳಗೇ ಹುದುಗಿಸಿಕೊಳ್ಳಬೇಕನ್ನಿಸುತ್ತದೆ. ಈ ಕಣ್ಣಾಮುಚ್ಚಾಲೆಯಾಟದ ರೋಚಕತೆಯನ್ನು ನೋಡಿಯೇ ಅನುಭವಿಸಬೇಕು.

ಇನ್ನೊಮ್ಮೆ ಅಜ್ಜನ ಜೊತೆ ಸೋಫಿ ತೋಟಕ್ಕೆ ಹೋಗುವಾಗಲೂ ರಕ್ಕಸರು ಎದುರಾಗುತ್ತಾರೆ. ಪುಟಾಣಿಯೇನೋ ತಲೆ ತಪ್ಪಿಸಿಕೊಳ್ಳುವುದು ಸುಲಭ. ಆದರೆ, ರಕ್ಕಸರ ಎಗತಾಳಿಗೆ, ಪೈಶಾಚಿಕ ವಿನೋದಕ್ಕೆ ಬಿಎಫ್‌ಜಿ ಒದೆಸಿಕೊಳ್ಳುವ ಚೆಂಡಿನಂತೆ ಬಳಕೆಯಾಗುತ್ತಾನೆ.

ಆತಂಕದ ಕ್ಷಣಗಳ ನಡುವೆಯೂ ದಿನದಿಂದ ದಿನಕ್ಕೆ ಬಿಎಫ್‌ಜಿ ಹಾಗೂ ಸೋಫಿಯ ನಡುವಣ ಆತ್ಮೀಯತೆ ಗಾಢವಾಗುತ್ತದೆ. ಸೋಫಿಯನ್ನು ಹುಡುಕುತ್ತ ರಕ್ಕಸರು ಬಿಎಫ್‌ಜಿಯ ಮನೆಯನ್ನು ಹಾಳುಗೆಡವಿದರೂ, ಅವನ ಅಂತಃಕರಣವನ್ನು ವಿಚಲಿತಗೊಳಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಸೋಫಿ ಹಾಗೂ ಬಿಎಫ್‌ಜಿ – ಇಬ್ಬರೂ ತಂತಮ್ಮ ಬದುಕಿನಲ್ಲಿ ತಪ್ಪಿಹೋದ ವಾತ್ಸಲ್ಯದ ತಂತುಗಳನ್ನು ಪರಸ್ಪರ ಮೀಟಿಕೊಳ್ಳುತ್ತಾರೆ. ದೇಹಾಕಾರದಲ್ಲಿ, ವಯಸ್ಸಿನಲ್ಲಿ ಅಪಾರ ಅಂತರವಿದ್ದರೂ ಮನೋಭಾವದಲ್ಲಿ ಇಬ್ಬರೂ ಮಕ್ಕಳೇ! ತಾನು 'ಒಂಟಿ' ಎನ್ನುವ ಭಾವ ಇಬ್ಬರಲ್ಲೂ ದೂರವಾಗುತ್ತದೆ.

ಬಿಎಫ್‌ಜಿಯ ವ್ಯಕ್ತಿತ್ವದ ಸೊಗಸಿರುವುದು ಪ್ರಕೃತಿಯೊಂದಿಗೆ ಅವನು ಹೊಂದಿರುವ ಸಂಬಂಧದಲ್ಲಿ. ಮರಗಿಡಗಳೊಂದಿಗೆ ಪಿಸುನುಡಿಯಬಲ್ಲ ಆತ, ಹಣ್ಣು–ತರಕಾರಿಗಳನ್ನು ಬೆಳೆಯುವ ರೈತನೂ ಹೌದು, ಬೀಜರಕ್ಷಕನೂ ಹೌದು. ಇಂಥ ಬಿಎಫ್‌ಜಿಗೆ ಕನಸುಗಳನ್ನು ಸಂಗ್ರಹಿಸುವ ವಿಶಿಷ್ಟ ಹವ್ಯಾಸವೂ ಇದೆ. ಅವನ ಬಳಿ ಕನಸುಗಳ ಬಹುದೊಡ್ಡ ಸಂಗ್ರಹವೂ ಇದೆ.

ಸಿನಿಮಾದ ಬಹು ಸೊಗಸಾದ ಭಾಗ ಕನಸುಗಳ ಕೊಳ್ಳದಲ್ಲಿ (ಡ್ರೀಮ್‌ಲ್ಯಾಂಡ್‌ನಲ್ಲಿ) ಬಿಎಫ್‌ಜಿ ಹಾಗೂ ಸೋಫಿ ಇಬ್ಬರೂ 'ಆನಂದದ ದಿವ್ಯಶಿಶು'ಗಳಾಗುವುದು. ಕನಸುಗಳನ್ನು ಸಂಗ್ರಹಿಸಲಿಕ್ಕಾಗಿ ಬಿಎಫ್‌ಜಿ ತನ್ನೊಂದಿಗೆ ಸೋಫಿಯನ್ನೂ ಕರೆದೊಯ್ಯುತ್ತಾನೆ. ಅಲ್ಲಿ ಹಕ್ಕಿಗಳಂತೆ ಹಾರಾಡಿಕೊಂಡಿರುವ ಕನಸುಗಳನ್ನು ಆತ ತನ್ನ ಗಾಳದಲ್ಲಿ ಬಂಧಿಸುತ್ತಾನೆ. ಸೋಫಿ ಕೂಡ ಅವನಿಗೆ ನೆರವಾಗುತ್ತಾಳೆ. ಕನಸುಗಳೊಂದಿಗೆ ಅಜ್ಜ–ಬಾಲಕಿ ಇಬ್ಬರೂ ತಾವೂ ಕನಸುಗಳಾಗಿ ವಿಹರಿಸುತ್ತಾರೆ. ಬಣ್ಣಬಣ್ಣದ ಆ ಕ್ಷಣಗಳು ನೋಡುಗರನ್ನೂ ಸ್ವಪ್ನಲೋಕಕ್ಕೆ ಕೊಂಡೊಯ್ಯುತ್ತವೆ.

'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಕನಸುಗಳಿಲ್ಲದ ದಾರಿಯಲ್ಲಿ ನಡೆಯುವುದು